 




ಅಕ್ಟೋಬರ್ 1ರಿಂದ ಯುರೋಪ್ ದೇಶಗಳ ಪ್ರವಾಸದಲ್ಲಿರುವ ಸಭಾಪತಿ ಬಸವರಾಜ ಹೊರಟ್ಟಿ ಅವರ ತಂಡ ಪಶ್ಚಿಮ ಆಫ್ರಿಕಾದಲ್ಲಿ ನಡೆದ ಅಂತರಾಷ್ಟ್ರೀಯ ಸಭಾಧ್ಯಕ್ಷರ ಸಮ್ಮೇಳನ ಮುಗಿಸಿ ತದನಂತರ ರೋಮ್ ಇಟಲಿ ಸ್ವಿಜಲ್ಯಾಂಡ್ ಜೋರಿಚ್ ನಂತಹ ದೇಶಗಳಲ್ಲಿರುವ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಿ ಕಳೆದ ಎರಡು ದಿನಗಳಿಂದ ಫ್ರಾನ್ಸ್ ದೇಶದ ಪ್ಯಾರಿಸ್ ನಗರದ ಸುತ್ತಮುತ್ತಲಿನ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಿದರು.








ಕಳೆದ 15 ದಿನಗಳಿಂದ ಯುರೋಪ್ ದೇಶಗಳ ಪ್ರವಾಸದಲ್ಲಿರುವ ಸಭಾಪತಿ ಬಸವರಾಜ್ ಹೊರಟ್ಟಿ ಅವರ ತಂಡ ಇಂದು ಫ್ರಾನ್ಸ್ ದೇಶದ ಪ್ಯಾರಿಸ್ ನಗರದಲ್ಲಿ 125 ವರ್ಷಗಳ ಹಿಂದೆ ನಿರ್ಮಾಣಗೊಂಡ ವಿಶ್ವ ಪ್ರಸಿದ್ಧ ''ಐಪಲ್ ಗೋಪುರ'' ವೀಕ್ಷಿಸಿದ ಹೊರಟ್ಟಿ ಅವರ ತಂಡದ ಸಂತಸದ ಕ್ಷಣಗಳು. ಕಬ್ಬಿಣದಿಂದ ನಿರ್ಮಾಣಗೊಂಡ ಗೋಪುರವಿದು. ಪ್ಯಾರಿಸ್ ನಗರದ ಸಂಕೇತವಾಗಿದ್ದು ವಿಶ್ವ ಪ್ರಸಿದ್ಧ ಕಟ್ಟಡಗಳಲ್ಲಿ ಒಂದಾಗಿದೆ.

ಅಲ್ಲದೆ ಪ್ಯಾರಿಸ್ ನಗರದಲ್ಲಿನ ವಿವಿಧ ಸುಪ್ರಸಿದ್ಧ ಸ್ಥಳಗಳಿಗೆ ಭೇಟಿ ನೀಡಿ ಹತ್ತಾರು ಮಹತ್ವದ ಮಾಹಿತಿಗಳನ್ನು ಪಡೆದರು.








ದಿನಾಂಕ:16-10-23 ರಂದು ಲಂಡನಿಗೆ ಬಂದಿಳಿದ ತಕ್ಷಣ ಮಾನ್ಯ ಸಭಾಪತಿ ಶ್ರೀ ಬಸವರಾಜ್ ಹೊರಟ್ಟಿ ಅವರ ತಂಡವನ್ನು ಲಂಡನ್ನಿನ ಕನ್ನಡಿಗರಾದ ಬಸವ ಬಳಗದ ಸದಸ್ಯರು ಬಸವಣ್ಣನವರ "ಕಾಯಕವೇ ಕೈಲಾಸ" ಎಂಬ ತತ್ವದ ಬಿತ್ತಿಪತ್ರ ಹಿಡಿದು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ತದನಂತರ ಥೇಮ್ಸ್ ನದಿಯ ದಂಡೆಯಲ್ಲಿ ಸ್ಥಾಪಿಸಿದ ಜಗಜ್ಯೋತಿ ಬಸವಣ್ಣನವರ ಮೂರ್ತಿಗೆ ಗೌರವ ಸಲ್ಲಿಸಿದ ಮಾನ್ಯ ಸಭಾಪತಿ ಅವರು ಅಲ್ಲಿನ ಕನ್ನಡಿಗರನ್ನು ಕುರಿತು ಮಾತನಾಡಿ ವಿದೇಶದಲ್ಲಿದ್ದರು ಕನ್ನಡ ಅಭಿಮಾನ ಕನ್ನಡ ಮೇಲಿನ ಪ್ರೀತಿ ಜಗಜ್ಯೋತಿ ಬಸವಣ್ಣನವರ ಆಚಾರ ವಿಚಾರಗಳನ್ನು ಪಾಲಿಸುತ್ತಿರುವ ತಮಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುವುದಾಗಿ ಹೇಳಿದರು.




ಈ ಸಂದರ್ಭದಲ್ಲಿ ಬಸವಣ್ಣನವರ ಮೂರ್ತಿ ಪ್ರತಿಷ್ಠಾಪನೆಗೆ ಕಾರ್ಣಿಕರ್ತರು ಕನ್ನಡಿಗರು ಹಾಗೂ ಲಂಡನ್ನಿನ ಮಾಜಿ ಮೇಯರ್ ಆದ ಡಾ.ನಿರಜ್. ಪಾಟೀಲ್ ಅವರು ಮಾತನಾಡಿ ನಾವು ಎಲ್ಲೇ ಇದ್ದರೂ ನಮ್ಮ ನೆಲ, ಭಾಷೆ, ನಮ್ಮ ಪೂರ್ವಿಕರನ್ನು ಸ್ಮರಿಸಿಕೊಂಡೆ ದಿನದ ಪ್ರತಿಕ್ಷಣವನ್ನು ಕಳೆಯುತ್ತೇವೆ. ಕನ್ನಡಿಗರು ಜಗತ್ತಿನ ಮೂಲೆ ಮೂಲೆಯಲ್ಲಿ ವಾಸಿಸುವ ಮೂಲಕ ತಮ್ಮದೇ ಆದ ಸಾಧನೆ ಮೂಲಕ ಕನ್ನಡದ ಕಂಪನ್ನು ಜಗತ್ತಿನ ತುಂಬೆಲ್ಲ ಬಿತ್ತರಿಸಿದ್ದಾರೆ ಹೆಚ್ಚಿನ ಸಂಖ್ಯೆ ಕನ್ನಡಿಗರು ಇಲ್ಲಿ ಇದ್ದಾರೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷರಾದ ಯು. ಟಿ. ಖಾದರ್ ಅವರು ಸೇರಿದಂತೆ ವಿವಿಧ ಜನಪ್ರತಿನಿಧಿಗಳು ಹಿರಿಯ ಅಧಿಕಾರಿಗಳು ಲಂಡನ್ನಿನಲ್ಲಿ ವಾಸಿಸಿರುವ ಕನ್ನಡ ಅಭಿಮಾನಿಗಳು ಮುಂತಾದವರು ಉಪಸ್ಥಿತರಿದ್ದರು.